ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನು ಬರಸಿಕೊಂಟ್ಟವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
114 82—83	ಮೈಸೂರು ಮಂಡಿ ಮಹೆಲಾದಲ್ಲಿ ಇರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ದುಂಡಿಯ್ಯನ ಮಗ ರಂಗಣ್ಣ.	ಮೈಸೂರು ಲಷ್ಕರ್ ಮೊಹಲ್ಲೇಲಿರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ಚಿಕ್ಕತಿಂಮಯ್ಯನ ಮಗ ದಾಸಣ್ಣ.	30—5—82	2—6—82	75 ರೂಪಾಯಿನ ಮನೆ ಆದಾರದ ಪತ್ರ.
636 81—82	ಮೈಸೂರು ಇಟ್ಟಿಗೆ ಗೂಡಿನಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾ ಮುಂಡಾಚಾರಿ, ಕಿರೀ ಮಗ ಲಷ್ಕ್ರಣಾಚಾರಿ, ಮಧ್ಯೆಮಗ ನಾರಣಾಚಾರಿ.	ಮೈಸೂರು ಇಟ್ಟಿಗೆ ಗೂಡಿನಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾ ಮುಂಡಾಚಾರಿ ಕಿರಿಮಗ ಲಕ್ಷ್ಮಣಾಚಾರಿ ಮಧ್ಯೆ ಮಗ ನಾರಣಾಚಾರಿ.	20—1—82	23—1—82	90 ರೂಪಾಯಿನ ಸ್ಥಿತಿ ಹಂಜಿ ಕೊಂಡ ವಿಭಾಗ ಪತ್ರ.
738 81—82	ಮೈಸೂರು ಜೊಸಲಗ್ರಹಾರದಲ್ಲಿ ಇರುವ ವಿಷ್ಣುವರ್ಧನ ಜಾತಿ ನಕ್ಕಳದ ಜನ್ನಪ್ಪನ ಮಗ ಅರಮನೆ ಚಾಕರಿವೆಳ್ಳ ನಂಜಪ್ಪ.	ಅಸಿಸ್ಟೆಂಟ್ ಕಮ್ಮಿಷ್ಣರ್ ಕೃಷ್ಣಸ್ವಾಮಯ್ಯಂಗಾರ್ರ ಮಕ್ಕಳು ಎಂ. ಬಿ. ರಾಮಸ್ವಾಮಯ್ಯಂಗಾರ್.	7—3—82	9—3—82	450 ರೂಪಾಯಿನ ಹೆಂಚಿನ ಅಂಗಡಿ ವಗೈರೆ ಕ್ರಯಪತ್ರ.
799 81—82	ಮೈಸೂರು ಶ್ರೀರಾಂ ಪೇಟೇಲಿರುವ ವೆಂಕಟರಮಣಯ್ಯನ ಮಗ ಲೇಟ್ ಅಷ್ಟಗ್ರಾಂ ಡಿವಿಜ್ ಸೆರ್ಷ್ ಕೋರ್ಟು ಅಸಿಸ್ಟೆಂಟ್ ರಿಕಾರಡ್ ಕೀಪರ್ ಸಿ. ಸುಬ್ಬರಾವ್	ಮೈಸೂರು ಶ್ರೀರಾಂ ಪೇಟೇಲಿರುವ ವೈಶ್ಯರ ನಾಭಾವೆಂಕಟೇಶಯ್ಯನ ಮಗ ವಸಾರಿ ಅಂಗಡಿ ವೈಶ್ಯರ ನಾಭಾನಾರಣಶೆಟ್ಟಿ.	23—3—82	29—3—82	ತಿಂಗಳು 1ಕ್ಕೆ 3—12—0 ನೇರಿಗೆ 4 ವರುಷಕ್ಕೆ ಹುಟ್ಟಿದ ಮನೆ ಭಾಡಾ ದಸ್ತ್ರೈವಜ್.

ಅಬ್ದುಲ್‌ಖಾದರ್, ಕೆ. ಬಿ.
ರಿಜಿಸ್ಟ್ರಾರ್.

ನಗರ ಡಿವೀರ್ಜ.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 123.

ಮೃತಪಟ್ಟ ತಮ್ಮಣ್ಣ ಹೆಗ್ಗಡೆಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಐಯ್ಯಂಣನು, ಮೃತಪಟ್ಟ ಸದರೀ ತಮ್ಮಂಣ ಹೆಗ್ಗಡೆಗೆ ಸಹೋದರನ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪ ತಾಲ್ಲೂಕು ಹೊನ್ನವಳ್ಳಿ ಸ್ಥಳದ ಐಯ್ಯಂಣನು ಸದರೀ ಹೊನ್ನವಳ್ಳಿ ವಾಸಸ್ಥನಾಗಿ ಮೃತಪಟ್ಟ ತಮ್ಮಂಣ ಹೆಗ್ಗಡೆಯ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿ ಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಐಯ್ಯಂಣನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಂಣ ಹೆಗ್ಗಡೆಯ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜಿ ನಂಬರ್ 124.

ವೃತಪಟ್ಟ ತಿಮ್ಮೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಮಲ್ಲಕ್ಕನು, ವೃತಪಟ್ಟಸದರೀ ತಿಮ್ಮೇಗೌಡನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ತಾಲ್ಲೂಕ ಹಿರಿಯಂಗಳ ಸ್ಥಳದ ಮಲ್ಲಕ್ಕನು ಸದರೀ ಹಿರಿಯಂಗಳ ವಾಸಸ್ಥನಾಗಿ ವೃತಪಟ್ಟ ತಿಮ್ಮೇಗೌಡನ ಜೆಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಲ್ಲಕ್ಕನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ತಿಮ್ಮೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜಿ ನಂಬರ್ 125.

ವೃತಪಟ್ಟ ತಾಳಗುಪ್ಪೆ ಜಾಬಿಕೆಟ್ಟಿ ಸಿದ್ದಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಗುರಮ್ಮನು, ವೃತಪಟ್ಟ ಸದರೀ ಜಾಬಿಕೆಟ್ಟಿ ಸಿದ್ದಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಸಾಗರ ತಾ॥ ತಾಳಗುಪ್ಪೆ ಸ್ಥಳದ ಗುರಮ್ಮನು ಸದರೀ ತಾಳಗುಪ್ಪೆ ವಾಸಸ್ಥನಾಗಿ ವೃತಪಟ್ಟ ಜಾಬಿಕೆಟ್ಟಿ ಸಿದ್ದಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವೃತಪಟ್ಟ ಜಾಬಿಕೆಟ್ಟಿ ಸಿವಪ್ಪನ ಮೈನರ್ ಮಕ್ಕಳಾದ 1ನೇ ಸಿದ್ದಪ್ಪ 2ನೇ ಸಿವಲಿಂಗಪ್ಪ ಇವರಿಗೆ ಗಾರ್ಡಿಯರ್ ಆಗಿ ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾಳೆ.

ಸದರೀ ದರಖಾಸ್ತುದಾರಳಾದ ಗುರಮ್ಮನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಜಾಬಿಕೆಟ್ಟಿ ಸಿದ್ದಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜಿ ನಂಬರ್ 126.

ವೃತಪಟ್ಟ ಹಳೆಮನೆ ತಮ್ಮಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಾಮಯ್ಯನು ವೃತಪಟ್ಟ ಸದರೀ ಹಳೆಮನೆ ತಮ್ಮಯನಿಗೆ ಖಾಸಾ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪ ತಾ॥ ಸುಂಕರ್ಡಿ ಸ್ಥಳದ ರಾಮಯ್ಯನು ಸದರೀ ಸುಂಕರ್ಡಿ ವಾಸಸ್ಥನಾಗಿ ವೃತಪಟ್ಟ ಹಳೆಮನೆ ತಮ್ಮಯನ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರಾಮಯ್ಯನ ಅರ್ಜೀಯನ್ನು 1885ನೇ ಇಸವಿ ಜನವರೀ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಹಳೆಮನೆ ತಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಡಿಶಂಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 3ನೇ ಡಿಶಂಬರ್ 1884.

ಸ್ಕ್ 1884ನೇ ಇಸವಿ ಅಕ್ಟೋಬರ್ 10ನೇ ಮರ್ತು ಮಿನ ಆಸ್ತಿ ಹಾರ್ನಾಮೆ ಅನುಸರಿಸಿ 1884ನೇ ಇಸವಿ ನವೆಂಬರ್ 3ನೇ ಮರ್ತುಂನಲ್ಲಿ ನಡಿಸಲ್ಪಟ್ಟ ಹರಾಜಿನಲ್ಲಿ ಪಡಕೊಂಡ ದರಖಾಸ್ತುದಾರರು, ಅವರ ಕಂಟ್ರಾಕ್ಟನ್ನು ಕ್ರಮವಾಗಿ ನೆರವೇರಿಸುವದಕ್ಕೆ ಜಾಮೀನ್‌ಕೊಡದೇ ತಪ್ಪಿಹೋದದರಿಂದ ಇದರಿಂದ ಪ್ರಕಟಪಡಿಸುವದೇನಂದರೆ,—ಸದರೀ ಮೇಲ್ಕಂಡ ಹರಾಜು ರದ್ದುಮಾಡಿರುವದಲ್ಲದೆ ಚಿಕ್ಕಮಗಳೂರು, ಕಡೂರು ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಾಗಲಿ, ಈ ಪೈಕಿ ಯಾವ ತಾಲ್ಲೂಕಿನಲ್ಲಾಗಲಿ, ಇರತಕ್ಕ ವೊಣಗಿದ ಗಂಧದ ಮರ